



**ಚಟುವಟಿಕೆ 25: ಸಾಕು ಪ್ರಾಣಿಗಳನ್ನು ಚಿತ್ರಿಸುವುದು**

**ವಯಸ್ಸು:** 8 ವರ್ಷ ಮೇಲ್ಪಟ್ಟವರು

**ಅಗತ್ಯ ವಸ್ತುಗಳು:** ಎ4 ಪೇಪರ್, ಪೆನ್ಸಿಲ್

**ಹಂತಗಳು:**

1. ನಿಮಗೆ ಗೊತ್ತಿರುವ ಎಲ್ಲಾ ವಿಭಿನ್ನ ಸಾಕು ಪ್ರಾಣಿಗಳ ಬಗ್ಗೆ ಯೋಚಿಸಿ ಮತ್ತು ನಿಮ್ಮ ಮನೆಯಲ್ಲಿ ಯಾವುದಾದರೂ ಒಂದು ಪ್ರಾಣಿ ಇದೆಯಾ? ನಿಮ್ಮ ಸುತ್ತಲೂ ನೀವು ನೋಡಿರುವ ಸಾಕುಪ್ರಾಣಿಗಳು ಯಾವುವು?
2. ನಿಮ್ಮ ಸಾಕು ಪ್ರಾಣಿಗಳು ಯಾವ ಆಕಾರ ಮತ್ತು ಯಾವ ಗಾತ್ರಗಳಲ್ಲಿವೆ? ಎಲ್ಲ ಪ್ರಾಣಿಗಳು ಒಂದೇ ಸಂಖ್ಯೆಯ ಕಾಲುಗಳು, ರೇಖೆಗಳು, ಗುರುತುಗಳು ಮತ್ತು ವಿನ್ಯಾಸಗಳನ್ನು ಹೊಂದಿವೆಯೇ? ಅಥವಾ ವಿಭಿನ್ನವಾಗಿವೆಯೇ? ನಿಮ್ಮ ನೆಚ್ಚಿನ ಪ್ರಾಣಿ ಯಾವುದು?
3. ನಿಮ್ಮಆಯ್ಕೆಯ ಒಂದು ಸಾಕು ಪ್ರಾಣಿಯನ್ನು ಆಯ್ಕೆಮಾಡಿ. ಚಿತ್ರ ಅಥವಾ ನಿಮ್ಮ ಸಾಕುಪ್ರಾಣಿಗಳನ್ನು ನೇರವಾಗಿ ನೋಡುವ ಮೂಲಕ ಅದನ್ನು ಚಿತ್ರಿಸಲು ಪ್ರಾರಂಭಿಸಿ.
4. ದೊಡ್ಡ ಆಕಾರದ ರೂಪರೇಖೆಯೊಂದಿಗೆ ಪ್ರಾರಂಭಿಸಿ ನಂತರ ಎಲ್ಲಾ ವಿವರಗಳು ಮತ್ತು ಟೆಕಶ್ಚರ್‌ಗಳನ್ನು ಸೇರಿಸಿ ಮತ್ತು ಪ್ರಕ್ರಿಯೆಯ ಉದ್ದಕ್ಕೂ ಸಾಕುಪ್ರಾಣಿಗಳನ್ನು ಸೂಕ್ಷ್ಮವಾಗಿ ಗಮನಿಸಿ.

5. ನೀವು ಒಂದು ಸಾಕು ಪ್ರಾಣಿಯನ್ನು ಚಿತ್ರಿಸುವುದನ್ನು ಮುಗಿಸಿದ ನಂತರ, ಇನ್ನೊಂದು ಸಾಕು ಪ್ರಾಣಿಯನ್ನು ಆರಿಸಿ ಮತ್ತು ಪ್ರಕ್ರಿಯೆಯನ್ನು ಪುನರಾವರ್ತಿಸಿ.
6. ನಿಮ್ಮ ಚಿತ್ರ ವು ಮುಗಿದ ನಂತರ ಸ್ನೇಹಿತರೊಡನೆ ಹಂಚಿಕೊಳ್ಳಿ ಮತ್ತು ನಿರ್ದಿಷ್ಟ ಸಾಕು ಪ್ರಾಣಿಗಳನ್ನು ಆಯ್ಕೆ ಮಾಡಲು ನೀವು ಏನು ಮಾಡಿದ್ದೀರಿ ಮತ್ತು ಪ್ರಾಣಿಗಳ ಮೇಲೆ ಯಾವ ಆಸಕ್ತಿದಾಯಕ ಗುರುತುಗಳು ಅಥವಾ ಮಾದರಿಗಳನ್ನು ನೀವು ಕಂಡುಕೊಂಡಿದ್ದೀರಿ ಎಂದು ಅವರಿಗೆ ತಿಳಿಸಿ.

*ನಮ್ಮ ಚಟುವಟಿಕೆಗಳು ನಿಮಗೆ ಆಕರ್ಷಕ ಮತ್ತು ಆಸಕ್ತಿದಾಯಕ ಎಂದು ನಿಮಗೆ ಅನಿಸಿದರೆ ನಿಮ್ಮ ಅನುಭವಗಳನ್ನು ಫೇಸ್ ಬುಕ್ ಮತ್ತು ಇನ್ಸ್ಟಾಗ್ರಾಮ್ ನಲ್ಲಿ ಹಂಚಿಕೊಳ್ಳಬಹುದು @artsparksfoundation ಎಂದು ಟ್ಯಾಗ್ ಮಾಡಿ. ನಮ್ಮ ಇತರಚಟುವಟಿಕೆಗಳು ಮತ್ತು ಮಾಹಿತಿಗಳನ್ನು ಪಡೆಯಲು ನೀವು ನಮ್ಮನ್ನು ಅನುಸರಿಸಬಹುದು.*

*ArtSparks Foundation*

ARTSPARKS
CURIOSITY. CREATIVITY. LEARNING.

[www.art-sparks.org](http://www.art-sparks.org)